**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ,**

**ಬೆಂಗಳೂರು-12**

ಸಂಖ್ಯೆ: ಪಪೂಶಿ/ಶೈ.ಶಾ/SDMC/2020-21 ದಿನಾಂಕ17-12-2020.

**ಅತೀ ತುರ್ತು**

**ನೆನಪೋಲೆ**

ವಿಷಯ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಾಲೇಜು ಅಭಿವೃದ್ಧಿ ಸಮಿತಿ(ಸಿ.ಬಿ.ಸಿ) / ಎಸ್.ಡಿ.ಎಂ.ಸಿ ಖಾತೆಗಳ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವ ಬಗ್ಗೆ

ಉಲ್ಲೇಖ: 1.ಸಮಗ್ರ ಶಿಕ್ಷಣ ಕರ್ನಾಟಕ ಇವರ ಪತ್ರ ಸಂಖ್ಯೆ ಸ.ಶಿ.ಕ/ಶಾಲಾನುದಾನ/ 2020-21 ದಿನಾಂಕ27.07.2020
2.ಈ ಕಛೇರಿ ಸಮ ಪತ್ರ ಸಂಖ್ಯೆ ದಿನಾಂಕ: 10.08.2020
3.ಈ ಕಛೇರಿ ಸಮ ಪತ್ರ ಸಂಖ್ಯೆ ದಿನಾಂಕ: 02.12.2020

-----

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ಸಾಲಿಗೆ 1231 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಸಮಗ್ರ ಶಿಕ್ಷಣ ಕರ್ನಾಟಕದ ನಿರ್ವಹಣೆಯ ಬಾಬ್ತು ಶಾಲಾನುದಾನದಡಿಯಲ್ಲಿ ಸೇರಿಸಲಾಗಿದೆ. ಸದರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಿರ್ವಹಣಾನುದಾನವನ್ನು ಪ್ರಸ್ತುತ ವರ್ಷದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ(ಸಿ.ಬಿ.ಸಿ) / ಎಸ್.ಡಿ.ಎಂ.ಸಿ ಖಾತೆಗೆ ಬಿಡುಗಡೆ ಮಾಡುವ ಸಂಬಂಧ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ನೀಡಲು ಕೋರಲಾಗಿತ್ತು. ಅದರೆ ಕೆಲವು ಕಾಲೇಜಿನವರು ಮಾಹಿತಿಯನ್ನು ಇಲ್ಲಿಯವರೆಗೂ ನೀಡಿರುವುದಿಲ್ಲ.

ಹಾಗಾಗಿ ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಕಾಲೇಜು ಅಭಿವೃದ್ಧಿ ಸಮಿತಿ(ಸಿ.ಬಿ.ಸಿ) / ಎಸ್.ಡಿ.ಎಂ.ಸಿ ಖಾತೆಯನ್ನು ತೆರೆಯದೆ ಇರುವ ಕಾಲೇಜಿನ ಪ್ರಾಂಶುಪಾಲರಿಂದ ಕಡ್ಡಾಯವಾಗಿ ತಕ್ಷಣವೇ ಖಾತೆಯನ್ನು ತೆರೆಸಿ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಸಂಖ್ಯೆಯ ಮಾಹಿತಿಯನ್ನು ಹಾಗೂ ಈಗಾಗಲೇ ಖಾತೆಯ ಮಾಹಿತಿ ಸರಿಯಾಗಿ ನೀಡದಿರುವ ಪ್ರಾಂಶುಪಾಲರಿಂದ ಮತ್ತೊಮ್ಮೆ ಪರಿಶೀಲಿಸಿ ಸರಿಯಾದ ಮಾಹಿತಿ ಪಡೆದುಕೊಂಡು ತಮ್ಮ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ಕಾಲೇಜುಗಳ ಸಿ.ಬಿ.ಸಿ / ಎಸ್.ಡಿ.ಎಂ.ಸಿ ಖಾತೆಯ ಕ್ರೋಢಿಕೃತ

ಮಾಹಿತಿಯನ್ನು ಈಗಾಗಲೇ ಇಲಾಖೆಯು ತಮಗೆ ನೀಡಿರುವ ನಮೂನೆಯಲ್ಲಿ ಸಿದ್ಧಪಡಿಸಿ ಇ-ಮೇಲ್ ಐಡಿ academicsdmc@gmail.com ಗೆ ರವಾನಿಸಲು ಸೂಚಿಸಿದೆ.

ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ನೀಡುತ್ತಿರುವ ಅನುದಾನವನ್ನು ಯಾವುದೇ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿ(ಸಿ.ಬಿ.ಸಿ) / ಎಸ್.ಡಿ.ಎಂ.ಸಿ ಖಾತೆಗೆ ತಲುಪದಿದ್ದಲ್ಲಿ ಸಂಬಂಧಿಸಿದ ಅನುದಾನಕ್ಕೆ ಆಯಾ ಕಾಲೇಜಿನ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಲಾಗುವುದು ಹಾಗೂ ಯಾವುದೇ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧ ಪಟ್ಟ ಪ್ರಾಂಶುಪಾಲರಿಂದ ವಸೂಲಿ ಮಾಡಲಾಗುವುದು ಮತ್ತು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸದರಿ ಮಾಹಿತಿಯನ್ನು ತಮ್ಮ ಜಿಲ್ಲೆಯ ಕಾಲೇಜುಗಳ ಪ್ರಾಂಶುಪಾಲರಿಗೆ ಕೂಡಲೇ ತಲುಪಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. ಈ ಕಾರ್ಯವನ್ನು **ಪ್ರಥಮ ಆದ್ಯತೆಯ** ಮೇರೆಗೆ ತುರ್ತಾಗಿ ನಿರ್ವಹಿಸದಿದ್ದಲ್ಲಿ ಸಂಬಂದಪಟ್ಟ ಜಿಲ್ಲೆಯ ಉಪನಿರ್ದೇಶಕರೇ ಜವಾಬ್ದಾರರಾಗಿರುತ್ತಾರೆ ಮತ್ತು ಅಂತಹವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

**ಗೆ,**

**ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಮೂಲಕ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ –ಅಗತ್ಯ ಕ್ರಮಕ್ಕಾಗಿ**